ಸಾರಿಗೆ ಇಲಾಖೆಯಿಂದ ಹುಣಸೂರು ತಾಲ್ಲೂಕಿಗೆ ಮಂಜೂರಾದ ಅನುದಾನ

ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು)

84 : (67)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಇದರ ವತಿಯಿಂದ ಕಳೆದ ಐದು ವರ್ಷಗಳಲ್ಲಿ ಹುಣಸೂರು ತಾಲ್ಲೂಕಿಗೆ ಬಿಡುಗಡೆಗೊಂಡ ಅನುದಾನವೆಷ್ಟು?

ಆ) ಬಿಡುಗಡೆಗೊಂಡ ಅನುದಾನಕ್ಕೆ ಯಾವ ಯಾವ ಕಾರ್ಯಕ್ರಮಗಳನ್ನು/ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ.

ಇ) ಹುಣಸೂರು ತಾಲ್ಲೂಕಿನ ಬಿಳಿಕೆರೆ ಹಾಗೂ ಕಟ್ಟೆಮಳಲವಾಡಿಯಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದೇ;

ಈ) ಬಂದಿದ್ದಲ್ಲಿ, ಪ್ರಸ್ತಾವನೆಯ ವಿವರವನ್ನು ನೀಡುವುದು. ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಆರ್.ಅಶೋಕ್ (ಮಾನ್ಯ ಉಪಮುಖ್ಯಮಂತ್ರಿಗಳು)

(ಗೃಹ ಮತ್ತು ಸಾರಿಗೆ)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಕಳೆದ ಐದು ವರ್ಷಗಳಲ್ಲಿ ಹುಣಸೂರು ತಾಲ್ಲೂಕಿಗೆ ಬಿಡುಗಡೆಯಾದ ಅನುದಾನದ ವಿವರಗಳು ಈ ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ಆರ್ಥಿಕ ವರ್ಷ	ಅನುದಾನದ ಮೊತ್ತ (ರೂ.ಗಳು ಲಕ್ಷಗಳಲ್ಲಿ)
1	2008–09	–
2	2009–10	90.00
3	2010–11	120.00
4	2011–12	90.00
5	2012–13	213.25
	ಒಟ್ಟು	**513.25**

ಆ) ಮೇಲ್ಕಂಡ ಅನುದಾನಗಳಡಿಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಂಡು ನಿರ್ವಹಿಸಲಾಗಿರುತ್ತದೆ.

ಕ್ರಮ. ಸಂಖ್ಯೆ	ಕೆಲಸದ ಹೆಸರು	ಅನುದಾನದ ಮೊತ್ತ (ರೂ.ಗಳು ಲಕ್ಷಗಳಲ್ಲಿ)
1	ಹುಣಸೂರು ಬಸ್ ನಿಲ್ದಾಣದ ಆವರಣಕ್ಕೆ ಕಾಂಕ್ರೀಟು & ಹೈಮಾಸ್ಟ್ ಅಳವಡಿಸುವುದು	210.00
2	ಹುಣಸೂರು ಬಸ್ ನಿಲ್ದಾಣಕ್ಕೆ ಕೂಡು ರಸ್ತೆ ನಿರ್ಮಿಸಿ ಡಾಂಬರೀಕರಣ ಮಾಡುವುದು	23.25
3	ಹುಣಸೂರು ಬಸ್ ಘಟಕದ ಆವರಣಕ್ಕೆ ಕಾಂಕ್ರೀಟು ಅಳವಡಿಸುವುದು	90.00
4	ಹುಣಸೂರು ಹಳೆ ಬಸ್ ನಿಲ್ದಾಣವನ್ನು ಟಿಟಿಎಂಸಿ ಕೇಂದ್ರ ಮತ್ತು ವಾಣಿಜ್ಯ ಕೇಂದ್ರವನ್ನಾಗಿ ಪರಿವರ್ತಿಸುವುದು	190.00
	ಒಟ್ಟು	513.25

ಇ) ಬಂದಿದೆ.

ಈ) ಬಿಳಿಕೆರೆ ಮತ್ತು ಕಟ್ಟೆಮಳವಾಡಿಯಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸಲಾಗಿದೆ. ಬಸ್ ನಿಲ್ದಾಣಕ್ಕೆ ಬೇಕಾದ ನಕ್ಷೆ ಮತ್ತು ಅಂದಾಜು ಪಟ್ಟಿ ತಯಾರಿಸುವ ಪ್ರಕ್ರಿಯೆಗಳು ಪ್ರಗತಿಯಲ್ಲಿರುತ್ತವೆ.